* *Encouragement to Professional Dramatists*

318. SRI H. D. DEVE GOWDA (Holenarasipur).—Will the Minister for Education be pleased to state :

(*a*) whether Government is giving any encouragement to the professional Dramatists on the lines of encouragement being given to the Film Producers by way of giving subsidy;

(*b*) whether there is any scheme with the Government in this regard; if so, the details thereof;

(*c*) if not, whether Government has thought it necessary to formulate some scheme in order to encourage the art of Drama;

(*d*) whether Government has received any representations from the Dramatic Companies asking for some help from Government;

(*e*) if so, the action taken thereon;

(*f*) the number of professional Drama Companies in the State ?

SRI M. MALLIKARJUNASWAMY (Minister for Education).—

(*a*) No.

(*b*) No.

(*c*) Yes. Dramatic Companies are being encourged through a scheme of assistance for construction of Dramatic Theatres in Municipal areas.

(*d*) No.

(*e*) Does not arise in view of answer to clause (*d*).

(*f*) There are about 22 Professional Companies in the State.

ಶ್ರೀ ಹೆಚ್. ಡಿ. ದೇವೇಗೌಡ :—ಸ್ವಾಮಿ, ಈ ಪ್ರಶ್ನೆಯ (ಇ)ಗೆ ಉತ್ತರ ವಾಗಿ ಹೌದು. ಪುರಸಭಾ ಪ್ರದೇಶಗಳಲ್ಲಿ ನಾಟಕ ಮಂದಿರಗಳನ್ನು ನಿರ್ಮಿಸುವ ಬಗ್ಗೆ ಸಹಾಯ ನೀಡಲು ಯೋಜನೆಯೊಂದರ ಮೂಲಕ ನಾಟಕ ಕಂಪೆನಿಗಳಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಹೇಳಿದ್ದೀರಿ. ದಯವಿಟ್ಟು ಇದರ ಬಗ್ಗೆ ವಿವರಣೆ ಕೊಡುತ್ತೀರಾ ?

‡ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಮ್ಯಾನ್ಯ ಅಧ್ಯಕ್ಷರೇ 7-3-1970 ರಲ್ಲಿ ಸರ್ಕಾರದಿಂದ ಒಂದು ಆಜ್ಞೆ ಹೊರಡಿಸಿದ್ದೇವೆ. ಆ ಪ್ರಕಾರವಾಗಿ ಯಾವುದಾದರೂ ನಾಟಕ ಮಂದಿರಗಳು ಪುರಸಭಾ ಪ್ರದೇಶದಲ್ಲಿ ನಿರ್ಮಿಸುವ ಬಗ್ಗೆ ಏನಾದರೂ ಅಸಿಸ್ಟೆನ್ಸ್ ಬೇಕು ಎಂದು ಕೋರಿದರೆ ಅವರಿಗೆ ಮುನಿಸಿಪಾಲಿಟಿ ಯವರು ಲ್ಯಾಂಡ್ ಕೊಡಬೇಕು. ಅವರಿಗೆ ಎಷ್ಟು ಲ್ಯಾಂಡ್ ಕೊಡಬೇಕು ಅದನ್ನು ಮುನಿಸಿಪಾಲಿಟಿಯವರು ಕೊಡಬೇಕು ಅಥವಾ ಅಲ್ಲಿ ಮುನಿಸಿಪಾಲಿಟಿ ಯವರ ಲ್ಯಾಂಡ್ ಇಲ್ಲದೇ ಹೋದರೆ ಸರ್ಕಾರದ ಲ್ಯಾಂಡನ್ನು ಕೊಡುವುದಕ್ಕೆ ಆಲೋಚನೆ ಮಾಡುತ್ತಾರೆ ಆ ಬಗ್ಗೆ ಡಿ. ಸಿ ರೆಕಮಂಡೇಷನ್ ಮೇಲೆ ಕೊಡ ಬೇಕಾಗುತ್ತದೆ. ಮತ್ತು ಅದಕ್ಕೆ 40 ಪರ್ಸೆಂಟ್ ಅಷ್ಟು ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಮುನಿಸಿಪಾಲಿಟಿಯವರು ಕೊಡಬೇಕು, ಉಳಿದದ್ದು 40 ಪರ್ಸೆಂಟ್ ಸರ್ಕಾರದವರು ಕೊಟ್ಟು ಉಳಿದದ್ದು 20 ಪರ್ಸೆಂಟ್ ಪಬ್ಲಿಕ್ ಡೊನೇಷನ್‌ನಿಂದ ಮುನಿಸಿಪಾಲಿಟಿಯವರು ಕೊಡಬೇಕಾಗುತ್ತದೆ ಮತ್ತು ಅದನ್ನು ಕಟ್ಟಲು ಪಿ. ಡಬ್ಲ್ಯೂ ಡಿ. ಯವರ ಕನ್‌ಸ್ಟ್ರಕ್ಷನ್‌ಗೆ ವಹಿಸುತ್ತೇವೆ. ಮತ್ತು ಅದರ ಮೆಂಟೇನೆನ್ಸ್‌ಗೆ ಮುನಿಸಿಪಾಲಿಟಿಯವರು ಕೊಡುತ್ತಾರೆ. ಮತ್ತು ಆ ಮ್ಯಾನೇಜ್ ಮೆಂಟ್‌ನವರು ಒಪ್ಪಿದರೆ ಒಂದು ಕಮಿಟಿ ಮಾಡುವುದಕ್ಕೂ ಅವಕಾಶ ಇರುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ :—ತಾವು ಪುರಸಭೆಗಳ ಮಿತಿಯಲ್ಲಿ ನಾಟಕ ಮಂದಿರಗಳನ್ನು ಕಟ್ಟುತಕ್ಕಂಥಾದ್ದು ಈಗ ಹೇಳಿದ್ದೀರಿ. ಅದು ನಾಟಕ ಕಂಪೆನಿ ಗಳಿಗೆ ಕೊಡತಕ್ಕಂಥ ಒಂದು ಉತ್ತೇಜನ ಎಂದು ಹೇಳುವುದಕ್ಕಾಗುವುದಿಲ್ಲ. ನಾಟಕ ಮಂದಿರಗಳನ್ನು ಕಟ್ಟಿ ಓಪನ್ ಥಿಯೇಟರ್ ಮಾಡಿ ಯಾರಾದರೂ ಕೂಡ ಅದನ್ನು ಬಾಡಿಗೆಗೆ ಕೊಡಬಹುದು ಅದು ಬೇರೆ ವಿಷಯ. ನಾನು ಹೇಳುವುದು ಏನೆಂದರೆ ನಾಟಕ ಕಂಪೆನಿಗಳವರೇ ಮುಂದೆ ಬಂದರೆ ಅವರಿಗೆ ಉತ್ತೇಜನ ಕೊಡುವ ನಲುವಾಗಿ ಯಾವುದಾದರೂ ಒಂದು ಸಬ್ಸಿಡಿಯನ್ನು ಕೊಟ್ಟು ಅವರ ಕಲೆಯನು ಉತ್ತೇಜನ ಮೂಡುವ ದೃಷ್ಟಿಯಿಂದ ಸರ್ಕಾರದವರು ಸಹಾಯ ಮಾಡುತ್ತೀರಾ

ಶ್ರೀ ಹೆಚ್. ಡಿ. ದೇವೇಗೌಡ :—ಈಗ ಅಂತಹ ಸ್ಕೀಮು ಯಾವುದೂ ಇಲ್ಲ. ಈಗ ನಾನು ಹೇಳಿದ ಒಂದು ಸ್ಕೀಮು ಮಾತ್ರ ಇದೆ.

ಶ್ರೀ ಹೆಚ್. ಡಿ. ದೇವೇಗೌಡ :—ಈಗ ಚಲನಚಿತ್ರಗಳಿಗೆ ಯಾವ ರೀತಿ ಒಂದು ಸಬ್ಸಿಡಿ ಕೊಡುತ್ತಿದ್ದೀರಿ ಅದೇ ರೀತಿ ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಹಿಂದಿನ ಒಂದು ಸಂಸ್ಕೃತಿಯನ್ನೂ ಮತ್ತು ಕಲೆಯನ್ನೂ ಬೆಳೆಸತಕ್ಕಂಥ ಮತ್ತು ಉಳಿಸಿಕೊಂಡು ಹೋಗತಕ್ಕಂಥವರು ಅದರಲ್ಲೂ ಪ್ರೊಫೆಷನಲ್ ಆರ್ಟಿಸ್ಟ್ಸ್ ಏನು ಇದ್ದಾರೆ ಅವರು ತಮ್ಮ ಒಂದು ಕಲೆಯನ್ನು ಇದಕ್ಕೆ ಮುಡುಪನ್ನಾಗಿ, ಅಂತಿಮ ವನ್ನಾಗಿ ಇಟ್ಟಿದ್ದಾರೆ, ಅಂಥಾವರು ಈವೊತ್ತಿನ ದಿವಸ ಬಹಳ ಕಷ್ಟದಲ್ಲಿದ್ದಾರೆ. ಅಂಥಾ ಸನ್ನಿವೇಶಗಳೂ ಕೂಡ ನಮಗೆ ಗೊತ್ತಿದೆ. ಆದುದರಿಂದ ಅಂಥಾ ನಾಟಕ ಕಂಪೆನಿಗಳು ಯಾವುವೇ ಇರಲಿ ಅವುಗಳಿಗೆ ಉತ್ತೇಜನ ಕೊಟ್ಟು ಆ ಕಲೆಯನ್ನು ಬೆಳೆಸುವುದಕ್ಕೆ ಯಾವುದಾದರೂ ಒಂದು ಸಬ್ಸಿಡಿ ರೂಪದಲ್ಲಿ ಅಂದರೆ 50 ನಾಟಕ ಗಳನ್ನು ಅವರು ಆಡಿದರೆ 25 ಸಾವಿರ ರೂಪಾಯಿ ಸಬ್ಸಿಡಿಯನ್ನೋ ಅಥವಾ ಅವರು 100 ನಾಟಕಗಳನ್ನು ಆಡಿದರೆ 50 ಸಾವಿರ ರೂಪಾಯಿ ಸಬ್ಸಿಡಿಯನ್ನೋ ಕೊಟ್ಟು ಆ ಕಲೆಯನ್ನು ಬೆಳೆಸುವುದಕ್ಕೆ ಸಹಾಯ ಮಾಡುತ್ತೀರಾ ? ಸಿನಿಮಾಕ್ಕೆ ಹೋಗಿ ನೋಡಿದರೆ ಜನ ಕ್ಯೂ ನಿಂತಿರುತ್ತಾರೆ. ಈ ದೃಷ್ಟಿಯಿಂದ ಅಂಥಾವರ ಬಗ್ಗೆ ಏನಾದರೂ ಸಹಾಯ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ರಾಜ್ಯದಲ್ಲಿ ಪ್ರೊಫೆಷನಲ್ ಡ್ರಾಮಾ ಟಿಕ್ ಕಂಪನೀಸ್ ಮತ್ತು ಅಮೆಚ್ಯೂರ್ ನಾಟಕ ಕಂಪನೀಸ್ ಏನು ಇವೆ ಅದಕ್ಕೆ ಸಂಗೀತ ನಾಟಕ ಅಕಾಡಮಿಯವರು ಆ ಬಗ್ಗೆ ಒಂದು ಯೋಜನೆಯನ್ನು ತೆಗೆದು ಕೊಂಡಿದ್ದಾರೆ. ಅದಕ್ಕೆ ಸರ್ಕಾರದವರು ಏನುಮಾಡುತ್ತಿದ್ದಾರೆ ಎಂದರೆ ಡ್ರಾಮ ಫೆಸ್ಟಿವಲ್ ಅಂತ ಮಾಡಿ ಅವರಿಗೆ ಎನ್‌ಕರೇಜ್ ಮಾಡುತ್ತಿದ್ದೇವೆ. ಅದು ಹೇಗೆಂದರೆ ಅವರು ನಾಟಕ ಎಷ್ಟು ಆಡುತ್ತಾರೆ ಅದರಲ್ಲಿ ಒಂದು ನಾಟಕ ಆರಿಸಿ ಕೊಂಡು ಆ ನಾಟಕ ತಯಾರು ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆ ಅದರ ಹೋಟಲ್ ಖರ್ಚನ್ನು ಅಕಾಡೆಮಿಯವರೇ ವಹಿಸಿಕೊಳ್ಳುತ್ತಾರೆ. ಮತ್ತು ಸಂಗೀತ ನಾಟಕ ಅಕಾಡಮಿಯವರು ಒಂದು ಸೆಲೆಕ್ಟೆಡ್ ಪ್ಲೇಸ್‌ನಲ್ಲಿ ಕೆಲವು ನಾಟಕಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಮತ್ತು ಇನ್ನು ಯಾವ ತರಹ ಅಸಿಸ್ಟೆನ್ಸ್ ಕೊಡುತ್ತೇವೆ ಎಂದರೆ ಇಂಡಿವಿಜ್ಯೂಯಲ್‌ಗೂ ಕೂಡ ಕೆಲವು ಪ್ರೋತ್ಸಾಹ ಕೊಡುತ್ತಿದ್ದೇವೆ. ಪ್ರೊಫೆಷನಲ್ ಆರ್ಟಿಸ್ಟ್ಸ್ ಇರುವವರಿಗೆ ಒಬ್ಬೊಬ್ಬರಿಗೆ 40 ರೂಪಾಯಿನಿಂದ 150 ರೂಪಾಯಿನವರೆಗೆ ಮಾಶಾಸನ ಕೊಡುತ್ತಿದ್ದೇವೆ. ಸುಮಾರು 15 ಜನಕ್ಕೆ ಕೊಡುತ್ತಿದ್ದೇವೆ. ಇದರಲ್ಲಿ ಡ್ರಾಮಾ ಆರ್ಟಿಸ್ಟ್ಸ್ ಕೂಡ ಸೇರಿದ್ದಾರೆ. ರಾಜ್ಯದಲ್ಲಿ ಈಗ ಸುಮಾರು 22 ನಾಟಕ ವೃತ್ತಿಯ ಕಂಪೆನಿಗಳು ಏನು ಇವೆ ಆ ಬಗ್ಗೆ ಮಾನ್ಯ ದೇವೇಗೌಡರು ಏನು ಹೇಳಿದ್ದಾರೆ ಅದರ ಬಗ್ಗೆ ಯಾವ ತರಹ ಯೋಜನೆ ಸರ್ಕಾರದಲ್ಲಿ ಇಲ್ಲ. ಅವರು ಹೇಳಿದ ರೀತಿಯಲ್ಲಿ ಡ್ರಾಮಾಟಿಕ್ ಕಂಪೆನಿಗಳು ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಗ್ರಾಮಗಳಲ್ಲಿರತಕ್ಕಂಥಾ ಕಲಾವಂತರು ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥಾ ಕಲಾವಂತರು ಯಾರು ಇದ್ದಾರೋ ಅವರನ್ನು ಗುರುತಿಸಿ ಅವರಿಗೆ ಪರಿಹಾರ ಕೊಡತಕ್ಕಂಥ ಕಾರ್ಯಕ್ರಮ ತೆಗೆದುಕೊಂಡು ಅವರ ಜೀವನವನ್ನು ಪುನರುಜ್ಜೀವನಗೊಳಿಸುವುದಕ್ಕೆ ಸಾಧ್ಯವೇ ? ಈ ಕಾರ್ಯಕ್ರಮವನ್ನು ತತ್‌ಕ್ಷಣ ಕೈಗೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಆ ಸಲಹೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ಎ. ಆರ್. ಬದರಿನಾರಾಯಣ್ :— ಸಿನಿಮಾ ಕಲೆ ಎಷ್ಟು ಮುಖ್ಯವೋ ನಾಟಕ ಕಲೆಯೂ ಕೂಡ ಅದಕ್ಕಿಂತಲೂ ಹೆಚ್ಚು ಮುಖ್ಯ. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಸಿನಿಮಾ ಕಲೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಈ ನಾಟಕ ಕಲೆಗೆ ಹೆಚ್ಚು ಪ್ರಾಮುಖ್ಯತೆ ಕೊಡದೇ ಇರುವುದು, ಈ ಡಿಸ್ಕ್ರಿಮಿನೇಷನ್‌ಗೆ ಕಾರಣ ಏನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಅದರಲ್ಲಿ ಡಿಸ್ಕ್ರಿಮಿನೇಷನ್ ಮಾಡಬೇಕು ಅಂತ ಏನೂ ಮಾಡಿಲ್ಲಾ. ಸಿನಿಮಾ ಕಲೆಗೆ ಪ್ರಾಮುಖ್ಯತೆ ಕೊಟ್ಟಿದ್ದೇವೆ, ಆದರೆ ನಾಟಕ ಕಲೆಗೆ ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟು ಕೊಡದೇ ಇರಬಹುದು.

ಶ್ರೀ ಎಂ. ಮಲ್ಲಪ್ಪ :—ಅಶಕ್ತ ಕನ್ನಡ ಕಲಾವಿದರಿಗೆ ವೃದ್ಧಾಪ್ಯ ವೇತನ ಕೊಡುವ ಯೋಜನೆ ಸರ್ಕಾರಕ್ಕೆ ಇದೆಯೇ ? ಇಲ್ಲದೇ ಹೋಗಿದ್ದರೆ ಅವರಿಗೇನಾದರೂ ಸಹಾಯ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಈಗಾಗಲೇ ಆ ಬಗ್ಗೆ ಉತ್ತರ ಹೇಳಿದ್ದೇನೆ ಆಶಕ್ತ ಕಲಾವಂತರನ್ನೂ ಸೇರಿಸಿಕೊಂಡು ಒಬ್ಬೊಬ್ಬರಿಗೆ 40 ರೂಪಾಯಿನಿಂದ 150 ರೂಪಾಯಿನವರಿಗೆ 15 ಜನಕ್ಕೆ ಮಂಜೂರು ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :....ಯಾವುದಾದರೂ ಸಂಸ್ಥೆಯವರು ಪುರಸಭಾ ಕ್ಷೇತ್ರದಲ್ಲಿ ನಾಟಕವನ್ನು ಕಟ್ಟುವುದಕ್ಕೆ ಮುಂದೆ ಬಂದರೆ ಅವರಿಗೆ ಸಹಾಯ ಕೊಡುತ್ತೇವೆ ಎಂದು ತಾವು ಈಗತಾನೇ ಹೇಳಿದಿರಿ. ಒಂದು ವೇಳೆ ಪುರಸಭೆಯವರೇ ಆಗಲಿ ಆಥವಾ ಗ್ರಾಮಪಂಚಾಯಿತಿಯವರೇ ಆಗಲಿ ಈ ನಾಟಕ ಮಂದಿರವನ್ನು ಕಟ್ಟುವುದಕ್ಕೆ ಮುಂದೆ ಬಂದರೆ ಅವರಿಗೆ ಸಹಾಯವನ್ನು ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ :—ಈಗ 40 ರೂಪಾಯಿನಿಂದ 150 ರೂಪಾಯಿನವರೆಗೆ ಆ ಕಲಾವಂತರಿಗೆ ಏನು ಕೊಡುತ್ತಿದ್ದಾರೋ ಅದು it is only in the form of award. ಸಂಗೀತ ಅಕಾಡಮಿಯವರು ಪ್ರತಿ ವರ್ಷವೂ ಕೆಲವು ಕಲಾವಂತರಿಗೆ ಅವಾರ್ಡ್ ಕೊಟ್ಟುಕೊಂಡು ಬರುತ್ತಿದ್ದಾರೆ. ಆದರೆ ನಾನು ಹೇಳುವುದು ಏನೆಂದರೆ ಈವೊತ್ತು ಅನೇಕ ಜನ ತಮ್ಮ ಇಡೀ ಜೀವನವನ್ನು ಈ ನಾಟಕ ರಂಗದಲ್ಲಿ ಕಲೆಗೋಸ್ಕರ ಮುಡುಪಾಗಿ ಏನು ಇಟ್ಟಿದ್ದಾರೋ ಅಂಥಾವರು ಈವೊತ್ತು ಉತ್ತಮ ಮಟ್ಟದಲ್ಲಿ ಇಲ್ಲ, ಕೆಲವರು ನಿರ್ಗತಿಕರಾಗಿದ್ದಾರೆ. ಆ ಬಗ್ಗೆ ಸಂಗೀತ ನಾಟಕ ಅಕಾಡಮಿಯವರು ತೀರ್ಮಾನ ಮಾಡುವುದು ಬೇರೆ ವಿಷಯ. ನನ್ನ ಪ್ರಶ್ನೆ ಏನೆಂದರೆ ಆ ಬಗ್ಗೆ ಒಂದು ಸ್ಕೀಮ್ ಮಾಡಿ ಯಾರು ಯಾರು ಪ್ರೊಫೆಷನಲ್ ಆರ್ಟಿಸ್ಟ್ ಇದ್ದಾರೆ, ಅವರ ಆರ್ಥಿಕ ಪರಿಸ್ಥಿತಿ ಕುಸಿದುಬಿದ್ದು ಹೋಗಿದ್ದರೆ ಅವರಿಗೆ ಬೇರೆ ಜೀವನ ಮಾರ್ಗವಿಲ್ಲದೇ ಹೋಗಿದ್ದರೆ ಅಂಥಾವರಿಗೆ ಒಂದು ಪೆನ್ಷನ್ ವೇತನ ರೂಪದಲ್ಲಿ ಸಹಾಯ ಮಾಡುವುದಕ್ಕೆ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :....ಅಂಥಾವರು ಇದ್ದರೆ ಅವರು ಅರ್ಜಿ ಹಾಕಿಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ :—ಆತ್ಮ ಗೌರವ ಇರುವವರು ಅರ್ಜಿ ಹಾಕಿಕೊಂಡರೂ ನಿಮ್ಮಲ್ಲಿ ಸಿಕ್ಕುವ ಹಾಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ನಾಟಕ ಕಂಪನಿಗಳವರು ನಾಮೂರು 50 ನಾಟಕಗಳನ್ನು ಆಡಿರಬಹುದು ಇಲ್ಲವೇ ನೂರು ಚೆನ್ನಾಗಿರುವ ನಾಟಕಗಳನ್ನು ಆಡಿರಬಹುದು. ಇಂತಹ ಕಂಪನಿಗಳಲ್ಲಿರುವ ಕಲಾವಿದರು ಈಗ ಮುಳುಗಿ ಬಹು ದುಸ್ಥಿತಿಯಲ್ಲಿರುವವರೂ ಇದ್ದಾರೆ. ಇಂತಹ ಕಲಾವಿದರುಗಳಿಗೆ ಸಿನಿಮಾಗಳಲ್ಲಿ ಉತ್ತೇಜನ ಕೊಡುವಂತೆ ನಂತರವಾದ ಇವರಿಗೂ ಏಕೆ ಉತ್ತೇಜನ ಕೊಡಬಾರದು ಎಂದು ಮಾನ್ಯ ವಿದ್ಯಾ ಮಂತ್ರಿಗಳು ಹೇಳಿದರು. ತಾವು ಇದರ ಬಗ್ಗೆ ಯೋಚನೆ ಮಾಡಿ ಇಂತಹ ನಾಟಕ ಕಲಾವಿದರಿಗೂ ಏನಾದರೂ ಸಹಾಯ ಮಾಡುವುದರ ಬಗ್ಗೆ ಆಶ್ವಾಸನೆ ಕೊಡುತ್ತೀರಾ ? ಇದನ್ನು ಬೆಸ್ಟ್ ಇಂಟರ್‌ಸ್ಟ್ನ ಮೇಲೆ ಕೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜಅರಸ್ :—ಈಗಾಗಲೇ ಕೆಲವು ಇಂಡಿವಿಜುಯಲ್ಸ್‌ಗಳಿಗೆ ನೆರವು ಕೊಡಲಾಗುತ್ತಿದೆ. ಆದರೆ ಇನ್ನೂ ಕೆಲವರು ಸಿಗದೆ ಇದರಲ್ಲಿ ಉಳಿ

ದಿರಲೂ ಬಹುದು. ಇದರಲ್ಲಿ ನಾಟಕ ಕಂಪನಿಗಳಿಗೂ ಕೊಡಬೇಕೆಂದು ಸಲಹೆ ಮೂಡುತ್ತಾರೆ. The principle underlying the subsidy to picture is totally different. You will appreciate because even at the time of increasing the Entertainment Tax, at one stage it was increased and the Government took the view and made a statement on the floor of the House that a large portion of this would be made use of for giving subsiby to the pictures with a view to encourage Kannada pictures. Because we said that this increased tax by way of Entertainment Tax would be spent, we have been following that policy. So far as dramas are concerned, we are not getting any amount of tax out of it. Nevertheless it is a new element which we have to consider. Now that there is a suggestion we will see how best it can be accommodated.

* *Detection of Counterfeit Cases*

331. SRI M. H. JAYAPRAKASH NARAYAN (Sirsi)—

Will the Chief Minister be pleased to state :

(*a*) the number of counterfeit cases detected by the corps of detectives in the State during the last three years;

(*b*) if so, stages at which various cases stand ;

(*c*) the number of cases filed in the Courts in this behalf ; out of them, the number of cases finally decided ; the number of cases which are pending decision and the number of cases under investigation by the Police and yet to be filed in Courts, (Districtwise and yearwise details may be furnished) ?

SRI D. DEVARAJ URS.(Chief Minister)—

(*a*) Six Cases

(*b*) 1. A case in Station Bazaar P. S. Cr. No. 138/73 ended in conviction.